# ನಾಟಕ ಮತ್ತು ಜನಪ್ರಿಯ ಸಂಸ್ಕೃತಿ

## ಹರೀಶ ಎಂ.ಸಿ.

ಸಂಶೋಧನಾರ್ಥಿ, ಮೌಂಟ್ ಶೆಫರ್ಡ್, ಮ್ಯೂಸಿಕ್ ಆಂಡ್ ಪರ್ಫಾರ್ಮಿಂಗ್ ಆರ್ಟ್ಸ್ ರೀಸರ್ಚ್ ಸೆಂಟರ್, ಬೆಂಗಳೂರು.

DOI: https://doi.org/10.5281/zenodo.18787781

## ABSTRACT:

ನಾಟಕವು ಮನುಷ್ಯನ ಜೀವನದ ಪ್ರಮುಖ ಘಟನೆಗಳು, ಮನೋಭಾವನೆಗಳು, ಸಂಘರ್ಷಗಳು ಮತ್ತು ಸಾಮಾಜಿಕ ವಾಸ್ತವ್ಯಗಳನ್ನು ಅಭಿನಯ, ಸಂಭಾಷಣೆ, ಚಲನೆ ಮತ್ತು ವೇದಿಕೆಯ ಪ್ರದರ್ಶನದ ಮೂಲಕ ಜೀವಂತವಾಗಿ ವ್ಯಕ್ತಪಡಿಸುವ ಒಂದು ಪ್ರಮುಖ ಸಾಹಿತ್ಯದ ಕಲಾರೂಪವಾಗಿದೆ. ಕೇವಲ ಓದಲು ಮಾತ್ರವಲ್ಲ, ಪ್ರೇಕ್ಷಕರ ಮುಂದೆ ಅಭಿನಯದ ಮೂಲಕ ರೂಪುಗೊಂಡ ಸಾಹಿತ್ಯವೇ ನಾಟಕ.

ಜನಪ್ರಿಯ ಸಂಸ್ಕೃತಿ (Popular Culture) ಎನ್ನುವುದು ಸಾಮಾನ್ಯ ಜನರು ದೈನಂದಿನ ಜೀವನದಲ್ಲಿ ಅನುಸರಿಸಲಾಗುವ ಜೀವನಶೈಲಿ, ಆಚಾರ–ವಿಚಾರಗಳು, ಭಾಷೆ, ಮನರಂಜನೆ, ಸಂಪ್ರದಾಯ, ನಂಬಿಕೆಗಳು ಹಾಗೂ ಸಾಮಾಜಿಕ ಅಭಿವ್ಯಕ್ತಿಗಳ ಒಟ್ಟುಗೂಡಿದ ರೂಪವಾಗಿದೆ. ಇದು ಜನಸಾಮಾನ್ಯರ ಬದುಕಿನಿಂದಲೇ ಹುಟ್ಟಿಕೊಂಡು, ಅವರ ಅನುಭವಗಳು, ಆಸಕ್ತಿಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ನಿರಂತರವಾಗಿ ರೂಪಾಂತರಗೊಳ್ಳುತ್ತದೆ.

ಜನಪ್ರಿಯ ಸಂಸ್ಕೃತಿಯಲ್ಲಿ ಜನಪದ ಹಾಡುಗಳು, ನಾಟಕಗಳು, ಜಾತ್ರೆಗಳು, ಹಬ್ಬಗಳು, ಸಿನೆಮಾ, ದೂರದರ್ಶನ ಧಾರಾವಾಹಿಗಳು, ಸಾಮಾಜಿಕ ಜಾಲತಾಣಗಳು, ಫ್ಯಾಷನ್, ಆಹಾರ ಪದ್ಧತಿ, ಮಾತಿನ ಶೈಲಿ, ಹಾಸ್ಯ ಅಂಶಗಳು ಸೇರಿವೆ. ಇವುಗಳಲ್ಲಿ ಉನ್ನತ ಸಂಸ್ಕೃತಿ (Elite Culture) ಯಂತೆ ಯಾವುದೇ ಕಠಿಣ ನಿಯಮಗಳು ಇರುವುದಿಲ್ಲ.

ನಾಟಕವು ಸಮಾಜದ ಸಾಂಸ್ಕೃತಿಕ ಸಂರಚನೆ ಮತ್ತು ಮಾನವ ಅನುಭವಗಳ ವಿಶ್ಲೇಷಣೆಗೆ ಅತ್ಯಂತ ಪ್ರಮುಖ ಕಲಾರೂಪವಾಗಿದ್ದು, ಜನಸಾಮಾನ್ಯರ ಜೀವನಶೈಲಿ, ಸಾಮಾಜಿಕ ಸಂಬಂಧಗಳು ಮತ್ತು ಇತಿಹಾಸಾತ್ಮಕ ಬದಲಾವಣೆಗಳನ್ನು ಕಲಾತ್ಮಕವಾಗಿ ಪ್ರತಿನಿಧಿಸುತ್ತದೆ. ಜನಪ್ರಿಯ ಸಂಸ್ಕೃತಿ ಎನ್ನುವುದು ಸಾಮಾನ್ಯ ಜನರ ದೈನಂದಿನ ಬದುಕಿನಲ್ಲಿ ರೂಪುಗೊಳ್ಳುವ ಭಾಷೆ, ಆಚರಣೆ, ನಂಬಿಕೆ, ಮನರಂಜನೆ, ಮಾಧ್ಯಮೀಯ ಅಭಿವ್ಯಕ್ತಿ ಮತ್ತು ಸಾಮಾಜಿಕ ಆಚರಣಾ ವಿಧಾನಗಳ ಸಮಗ್ರ ರೂಪವಾಗಿದೆ. ಈ ಸಂಶೋಧನಾ ಪತ್ರಿಕೆ ನಾಟಕ ಮತ್ತು ಜನಪ್ರಿಯ ಸಂಸ್ಕೃತಿಯ ನಡುವಿನ ಪರಸ್ಪರ ಸಂಬಂಧವನ್ನು ಸಾಂಸ್ಕೃತಿಕ ಅಧ್ಯಯನ ಹಾಗೂ ನಾಟಕ ಸಿದ್ಧಾಂತದ ಚೌಕಟ್ಟಿನಲ್ಲಿ ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ.

ಭಾರತೀಯ ಹಾಗೂ ಕನ್ನಡ ನಾಟಕ ಪರಂಪರೆಯಲ್ಲಿ ಯಕ್ಷಗಾನ, ಬಯಲಾಟ, ಸಣ್ಣಾಟ, ಜನಪದ ನಾಟಕಗಳಂತಹ ರೂಪಗಳು ಜನಪ್ರಿಯ ಸಂಸ್ಕೃತಿಯ ಜೀವಂತ ಸಾಕ್ಷಿಗಳಾಗಿವೆ. ಇವು ಜನಸಾಮಾನ್ಯರ ಭಾಷೆ, ಹಾಸ್ಯ,

ಸಂಗೀತ, ವೇಷಭೂಷಣ ಮತ್ತು ಸ್ಥಳೀಯ ಅನುಭವಗಳನ್ನು ಸಾಮಾಜಿಕ ವೇದಿಕೆಗೆ ತಂದು, ಸಾಂಸ್ಕೃತಿಕ ಮೌಲ್ಯಗಳು ಮತ್ತು ಶಕ್ತಿ ಸಂಬಂಧಗಳನ್ನು ಪ್ರತಿಬಿಂಬಿಸುತ್ತವೆ. ಸ್ವಾತಂತ್ರ್ಯೋತ್ತರ ಹಾಗೂ ಸಮಕಾಲೀನ ಕನ್ನಡ ನಾಟಕಗಳಲ್ಲಿ ಜನಪ್ರಿಯ ಸಂಸ್ಕೃತಿಯ ಅಂಶಗಳನ್ನು ವಿಮರ್ಶಾತ್ಮಕವಾಗಿ ಅಳವಡಿಸಿಕೊಂಡು ವರ್ಗಸಂಘರ್ಷ, ಲಿಂಗ ರಾಜಕೀಯ, ಶೋಷಣೆ, ಅಸ್ಮಿತೆ, ಸಂವೇದನೆ, ರಾಜಕೀಯ ಪ್ರಜ್ಞೆ ಮತ್ತು ಜಾಗತೀಕರಣದ ಪರಿಣಾಮಗಳಂತಹ ಸಂಕೀರ್ಣ ಸಾಮಾಜಿಕ ಪ್ರಶ್ನೆಗಳನ್ನು ಚರ್ಚಿಸಲಾಗಿದೆ.

ಆಧುನಿಕೋತ್ತರ ಕಾಲಘಟ್ಟದಲ್ಲಿ ಚಲನಚಿತ್ರ, ದೂರದರ್ಶನ, ಡಿಜಿಟಲ್ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ವಿಸ್ತಾರದಿಂದ ಜನಪ್ರಿಯ ಸಂಸ್ಕೃತಿಯ ಸ್ವರೂಪದಲ್ಲಿ ಮಹತ್ವದ ಪರಿವರ್ತನೆಗಳು ಸಂಭವಿಸಿವೆ. ಈ ಮಾಧ್ಯಮಿಕ ಬದಲಾವಣೆಗಳು ನಾಟಕದ ರೂಪರಚನೆ, ಕಥನಶೈಲಿ ಮತ್ತು ಪ್ರದರ್ಶನ ತಂತ್ರಗಳ ಮೇಲೂ ಪರಿಣಾಮ ಬೀರಿವೆ. ನಾಟಕವು ಜನಪ್ರಿಯ ಸಂಸ್ಕೃತಿಯನ್ನು ಅಂಧವಾಗಿ ಅನುಕರಿಸದೆ, ವಿಮರ್ಶಾತ್ಮಕವಾಗಿ ಅಳವಡಿಸಿಕೊಂಡಾಗ ಮಾತ್ರ ಅದು ಸಾಮಾಜಿಕ ಜಾಗೃತಿ, ಬೌದ್ಧಿಕ ಸಂವಾದ ಮತ್ತು ಸಾಂಸ್ಕೃತಿಕ ವಿಮರ್ಶೆಯ ಪರಿಣಾಮಕಾರಿ ವೇದಿಕೆಯಾಗುತ್ತದೆ. ಆದ್ದರಿಂದ, ನಾಟಕ ಮತ್ತು ಜನಪ್ರಿಯ ಸಂಸ್ಕೃತಿ ನಡುವಿನ ಸಂಬಂಧ ಅತ್ಯಂತ ಮಹತ್ವಪೂರ್ಣ ವಿಷಯವಾಗಿದೆ.

**KEYWORDS:**

ನಾಟಕ, ಜನಪ್ರಿಯ ಸಂಸ್ಕೃತಿ, ರಂಗಭೂಮಿ, ಜನಪದ, ಪ್ರಾಯೋಗಿಕ ನಾಟಕ, ಸಾಂಸ್ಕೃತಿಕ ಉತ್ಸವ.

## ಪರಿಚಯ:

ಮಾನವ ಸಮಾಜವು ತನ್ನ ಅನುಭವ ಮತ್ತು ಅನುಭಾವಗಳನ್ನು ಅಭಿವ್ಯಕ್ತಪಡಿಸಲು ಬಳಸಿಕೊಂಡಿರುವ ಅತ್ಯಂತ ಪ್ರಾಚೀನ ಹಾಗೂ ಪ್ರಭಾವೀ ಮಾಧ್ಯಮಗಳಲ್ಲಿ ನಾಟಕ ಪ್ರಮುಖವಾದದ್ದು. ನಾಟಕವು ಕೇವಲ ಮನರಂಜನೆಯ ದೃಶ್ಯರೂಪವಲ್ಲ; ಅದು ಸಮಾಜದ ಅಂತಸ್ಸತ್ವವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ. ಜನಪ್ರಿಯ ಸಂಸ್ಕೃತಿಯು ಜನಸಾಮಾನ್ಯರ ಬದುಕಿನ ನೇರ ಪ್ರತಿಫಲನವಾಗಿದ್ದು, ಅದು ಭಾಷೆ, ಆಹಾರ, ಉಡುಪು, ಆಚರಣೆ, ನಂಬಿಕೆ, ಕಲೆ ಮತ್ತು ಮನರಂಜನೆಯ ರೂಪಗಳಲ್ಲಿ ವ್ಯಕ್ತವಾಗುತ್ತದೆ. ಈ ಜನಪ್ರಿಯ ಸಂಸ್ಕೃತಿಯೊಂದಿಗೆ ನಾಟಕವು ಆಳವಾದ ಅವಿನಾಭಾವ ಸಂಬಂಧವನ್ನು ಹೊಂದಿದೆ.

ನಾಟಕ ಸಮಾಜದಿಂದ ಅಗತ್ಯ ವಿಷಯಗಳನ್ನು ಪಡೆದುಕೊಳ್ಳುತ್ತದೆ ಮತ್ತು ಅದೇ ಸಮಾಜಕ್ಕೆ ಗಹನವಾದ ಚಿಂತನೆಗಳನ್ನು ಹಿಂತಿರುಗಿಸುತ್ತದೆ. ಈ ಸಂವಾದರೂಪೀ ಕೊಡುಕೊಳ್ಳುವಿಕೆಯೇ ನಾಟಕ ಮತ್ತು ಜನಪ್ರಿಯ ಸಂಸ್ಕೃತಿಯ ನಡುವಿನ ಸಂಬಂಧವನ್ನು ಬಲಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ನಾಟಕ ಮತ್ತು ಜನಪ್ರಿಯ ಸಂಸ್ಕೃತಿಯ ಅಧ್ಯಯನವು ಸಾಂಸ್ಕೃತಿಕ ವಿಮರ್ಶೆಯ ಪ್ರಮುಖ ಕ್ಷೇತ್ರವಾಗಿದೆ.

**ನಾಟಕದ ತಾತ್ವಿಕ ಅರ್ಥ ಮತ್ತು ಸಾಮಾಜಿಕ ಪಾತ್ರ:**

ನಾಟಕವು ಅನುಕರಣಾತ್ಮಕ ಕಲೆ. ಮಾನವನು ತನ್ನ ಸುತ್ತಲಿನ ಬದುಕಿನ ಮನೋಭಾವಗಳನ್ನು ಪಾತ್ರಗಳಾಗಿ ರೂಪಿಸಿ ಅನುಕರಿಸುವ ಮೂಲಕ ವ್ಯಕ್ತಿ ಮತ್ತು ವ್ಯಕ್ತಿತ್ವಗಳನ್ನು ಅರ್ಥೈಸಿಕೊಳ್ಳಲು ನಾಟಕವನ್ನು ಬಳಸಿಕೊಂಡಿದ್ದಾನೆ. ಭರತಮುನಿಯ 'ನಾಟ್ಯಶಾಸ್ತ್ರ' ನಾಟಕವನ್ನು ಲೌಕಿಕ ಜೀವನದ ಪ್ರತಿರೂಪವೆಂದು ವಿವರಿಸುತ್ತದೆ. ನಾಟಕವು ರಸ, ರಾಗ, ಭಾವ, ಅಭಿನಯ ಮತ್ತು ಸಂಗೀತಗಳ ಸಮ ಸಂಯೋಜನೆಯ ಮೂಲಕ ಪ್ರೇಕ್ಷಕರ ಮನಸ್ಸನ್ನು ತಲುಪುತ್ತದೆ.

ನಾಟಕವು ಸಾಮಾಜಿಕವಾಗಿ ಜನರಲ್ಲಿ ಜೀವನ್ಮುಖೀ ಜಾಗೃತಿ ಮೂಡಿಸುವ ಸಶಕ್ತ ಕಲಾ ಮಾಧ್ಯಮವಾಗಿದೆ. ಸಮಾಜದಲ್ಲಿ ನಡೆಯುವ ಅನ್ಯಾಯ, ಶೋಷಣೆ, ಅಸಮಾನತೆ ಮತ್ತು ರಾಜಕೀಯ ದೌರ್ಜನ್ಯಗಳನ್ನು ನಾಟಕವು ನೇರವಾಗಿ ಅಥವಾ ಸಂಕೇತಾತ್ಮಕವಾಗಿ ಪ್ರಶ್ನೆ ಮಾಡುತ್ತದೆ. ಇಂತಹ ಕಾರಣಗಳಿಂದಲೇ ನಾಟಕವು ಜನಪ್ರಿಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ.

**ಜನಪ್ರಿಯ ಸಂಸ್ಕೃತಿಯ ಅರ್ಥ ಮತ್ತು ವ್ಯಾಪ್ತಿ:**

ಜನಪ್ರಿಯ ಸಂಸ್ಕೃತಿ ಎಂದರೆ ಪಟ್ಟಭದ್ರ ಹಿತಾಸಕ್ತಿಗಳ ಶಾಸ್ತ್ರೀಯ ಸಂಸ್ಕೃತಿಗೆ ವಿರುದ್ಧವಾಗಿ ಜನಸಾಮಾನ್ಯರ ದಿನನಿತ್ಯದ ಬದುಕಿನಲ್ಲಿ ಸಹಜವಾಗಿ ಹುಟ್ಟಿಕೊಂಡಂತಹ ಸಂಸ್ಕೃತಿ. ಜನಪದ ಗೀತೆಗಳು, ಕಥೆಗಳು, ಹಬ್ಬಗಳು, ನಾಟಕಗಳು, ಸಿನಿಮಾ, ಧಾರಾವಾಹಿಗಳು ಮತ್ತು ಸಾಮಾಜಿಕ ಮಾಧ್ಯಮ ಇವುಗಳೆಲ್ಲವೂ ಜನಪ್ರಿಯ ಸಂಸ್ಕೃತಿಯ ಭಾಗಗಳಾಗಿವೆ.

ಜನಪ್ರಿಯ ಸಂಸ್ಕೃತಿ ಸದಾ ಚಲನಶೀಲವಾದ ಸೃಜನಶೀಲ ಅಭಿವ್ಯಕ್ತಿ. ಅದು ಆಯಾ ಕಾಲಘಟ್ಟದ ಬದಲಾವಣೆಗಳಿಗೆ ತಕ್ಕಂತೆ ಪರಿವರ್ತಿತಗೊಳ್ಳುತ್ತಿರುತ್ತದೆ. ಈ ರೂಪಾಂತರ ಪ್ರಕ್ರಿಯೆಯಲ್ಲಿ ನಾಟಕವು ಪ್ರಮುಖ ಪಾತ್ರವಹಿಸುವ ಮೂಲಕ ನಾಟಕವು ಜನಪ್ರಿಯ ಸಂಸ್ಕೃತಿಯನ್ನು ಸ್ವೀಕರಿಸುತ್ತದೆ, ಜೊತೆಗೆ ಅದನ್ನು ವಿಮರ್ಶಾತ್ಮಕವಾಗಿ ರೂಪಿಸುತ್ತದೆ.

**ಜನಪದ ನಾಟಕಗಳು ಮತ್ತು ಜನಪ್ರಿಯ ಸಂಸ್ಕೃತಿ:**

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಜನಪದ ನಾಟಕಗಳು ಜನಪ್ರಿಯ ಸಂಸ್ಕೃತಿಯ ಜೀವಂತ ರೂಪಕಗಳಾಗಿವೆ. ಯಕ್ಷಗಾನ, ಬಯಲಾಟ, ಜಾತ್ರಾ ನಾಟಕಗಳು ಜನಜೀವನದ ನಂಬಿಕೆಗಳು, ಭಾವನೆಗಳು ಮತ್ತು ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಇವುಗಳಲ್ಲಿ ಭಾಷೆ ಸರಳವಾಗಿದ್ದು, ಸಂಗೀತ ಮತ್ತು ನೃತ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ.

ಜನಪದ ನಾಟಕಗಳಲ್ಲಿ ಪ್ರೇಕ್ಷಕರ ಪಾಲ್ಗೊಳ್ಳುವಿಕೆ ಪ್ರಮುಖವಾಗಿದೆ. ಪ್ರೇಕ್ಷಕರು ಕೇವಲ ನಾಟಕದ ನೋಡುಗರಷ್ಟೇ ಅಲ್ಲ; ಅವರು ನಾಟಕದಲ್ಲಿ ಸಮ್ಮಿಳಿತವಾದ ಒಂದು ಭಾಗವೇ ಆಗುತ್ತಾರೆ. ಇದುವೇ ಜನಪ್ರಿಯ ಸಂಸ್ಕೃತಿಯ ಮೂಲ

ಲಕ್ಷಣವಾಗಿದೆ. ಈ ನಾಟಕಗಳು ಸಾಮಾನ್ಯ ಜನರ ನಿತ್ಯ ಜೀವನದ ಸಮಸ್ಯೆಗಳನ್ನು ತಿಳಿ ಹಾಸ್ಯ, ವ್ಯಂಗ್ಯ, ವಿಡಂಬನೆ ಮತ್ತು ಕಾವ್ಯಾತ್ಮಕವಾಗಿ ಹೇಳುವ ಮೂಲಕ ಒಂದೇ ಹೊತ್ತಿಗೆ ನೋಡುಗರಲ್ಲಿ ಜಾಗೃತಿ ಮತ್ತು ಮನರಂಜನೆಯನ್ನು ತುಂಬುತ್ತವೆ.

**ಆಧುನಿಕ ನಾಟಕ ಮತ್ತು ಜನಪ್ರಿಯ ಸಂಸ್ಕೃತಿ:**

ಆಧುನಿಕ ಯುಗದಲ್ಲಿ ನಾಟಕವು ಸಾಮಾಜಿಕ ಜನಜೀವನದ ಬದಲಾವಣೆಗಳಿಗೆ ತಕ್ಕಂತೆ ಹೊಸ ಹೊಸ ರೂಪಗಳನ್ನು ಪಡೆದುಕೊಂಡಿದೆ. ನಗರೀಕರಣ, ಕೈಗಾರಿಕೀಕರಣ, ಜಾಗತೀಕರಣ ಮತ್ತು ಶಿಕ್ಷಣ ವ್ಯವಸ್ಥೆಯ ಆಧುನಿಕತೆಯ ಪರಿಣಾಮವಾಗಿ ನಾಟಕದ ವಸ್ತು ಮತ್ತು ಶೈಲಿಯಲ್ಲಿ ಬದಲಾವಣೆ ಹಾಗೂ ವೈವಿಧ್ಯತೆ ಕಂಡುಬಂದಿದೆ. ಆಧುನಿಕ ಯುಗದ ನಾಟಕಗಳು ಮಧ್ಯಮ ವರ್ಗದ ಸಮಸ್ಯೆಗಳು, ವ್ಯಕ್ತಿ ಹಾಗೂ ವ್ಯಕ್ತಿತ್ವಗಳ ಸಂವೇದನೆಗಳ ಅಸ್ತಿತ್ವದ ಸಂಕಷ್ಟ ಮತ್ತು ಸಾಮಾಜಿಕ ಸಂಘರ್ಷಗಳನ್ನು ಪ್ರತಿಬಿಂಬಿಸುತ್ತವೆ. ಪ್ರಾದೇಶಿಕ ಭಾಷೆ, ದೈನಂದಿನ ಘಟನೆಗಳು ಮತ್ತು ಸಮಕಾಲೀನ ರಾಜಕೀಯ ವಿಷಯಗಳು ನಾಟಕದ ವಸ್ತುಗಳಾಗಿವೆ. ಇದರಿಂದ ನಾಟಕವು ಜನಸಾಮಾನ್ಯರ ಮನಸಿಗೆ ಹತ್ತಿರವಾಗುತ್ತದೆ.

**ಪ್ರಾಯೋಗಿಕ ನಾಟಕಗಳು ಮತ್ತು ಯುವಜನತೆ:**

ಪ್ರಸ್ತುತ ಕಾಲಮಾನದಲ್ಲಿ ಪ್ರಾಯೋಗಿಕ ನಾಟಕಗಳು ಯುವಜನತೆಯ ಗಮನವನ್ನು ಹೆಚ್ಚು ಪ್ರಭಾವಿಯಾಗಿ ಆಕರ್ಷಿಸುತ್ತಿವೆ. ಇವು ಸ್ಥಾಪಿತ ನಾಟಕೀಯ ಸಂಪ್ರದಾಯಗಳನ್ನು ಮುರಿದು ನವನವೀನ ಅಭಿವ್ಯಕ್ತಿಯ ಹಾದಿಗಳನ್ನು ಕಂಡುಕೊಳ್ಳುತ್ತವೆ ಹಾಗೂ ಹುಡುಕುತ್ತವೆ. ಕಥಾನಕಕ್ಕಿಂತ ಭಾವನಾತ್ಮಕ ಅನುಭವಕ್ಕೆ ಹೆಚ್ಚು ಆದ್ಯತೆ ನೀಡುವುದು ಈ ನಾಟಕಗಳ ವಿಶೇಷತೆಯಾಗಿದೆ.

ಯುವಜನತೆ ಪ್ರಶ್ನಿಸುವ ಮನೋಭಾವವನ್ನು ಹೊಂದಿರುವುದರಿಂದ, ಪ್ರಾಯೋಗಿಕ ನಾಟಕಗಳು ಅವರ ಆಂತರ್ಯದ ಸಂಘರ್ಷಗಳು, ಅಸ್ಮಿತೆಯ ಬಿಕ್ಕಟ್ಟು ಮತ್ತು ರಾಜಕೀಯ, ಸಾಮಾಜಿಕ ಅಸಮಾಧಾನಗಳನ್ನು ನಾಟಕಗಳ ಪಾತ್ರಗಳ ಮೂಲಕ ಕಂಡುಕೊಂಡು, ಹೊರಹಾಕಲು ಮತ್ತು ವಿರೋಧ ವ್ಯಕ್ತಪಡಿಸಲು ಅವಕಾಶ ಒದಗಿಸುತ್ತದೆ. ನಾಟಕದ ಪಾತ್ರಗಳಲ್ಲಿ ಪಾತ್ರಾಭಿನಯಿಸುವವರು ಮತ್ತು ಪ್ರೇಕ್ಷಕರು ಒಂದೇ ಸಮಯದಲ್ಲಿ ಪರಕಾಯ ಪ್ರವೇಶ ಮಾಡಿ ತಮ್ಮೊಳಗನ್ನು ತೋಡಿಕೊಳ್ಳಲು ಅವಕಾಶ ಇರುವುದರಿಂದ ನಾಟಕವು ಜನಪ್ರಿಯ ಕಲಾ ಮಾಧ್ಯಮವಾಗಿ ಹೊರಹೊಮ್ಮಿದೆ.

**ಸಮೂಹ ಮಾಧ್ಯಮ, ಸಿನಿಮಾ ಮತ್ತು ನಾಟಕ:**

ಸಿನಿಮಾ ಮತ್ತು ದೂರದರ್ಶನವು ನಾಟಕದಿಂದ ಅನೇಕ ಕುಶಲ ತಂತ್ರಗಳನ್ನು ಅಳವಡಿಸಿಕೊಂಡಿವೆ. ಅದೇ ರೀತಿ, ನಾಟಕವೂ ಸಮೂಹ ಮಾಧ್ಯಮಗಳ ಆಕರ್ಷಕ ಶೈಲಿಯಿಂದ ಪ್ರಭಾವಿತವಾಗಿದೆ. ರಂಗಸಜ್ಜಿಕೆಯ ವಿನ್ಯಾಸ, ಬೆಳಕು ಮತ್ತು ಧ್ವನಿ ತಂತ್ರಜ್ಞಾನಗಳಲ್ಲಿ ಸಮೂಹ ಮಾಧ್ಯಮದ ಪ್ರಭಾವ ಸ್ಪಷ್ಟವಾಗಿದೆ.

ಡಿಜಿಟಲ್ ಯುಗದಲ್ಲಿ ಆನ್‌ಲೈನ್ ನಾಟಕಗಳು ಮತ್ತು ವೆಬ್ ಪ್ರದರ್ಶನಗಳು ಜನಪ್ರಿಯವಾಗುತ್ತಿವೆ. ಇದು ನಾಟಕವನ್ನು ಇಂದಿನ ವೇಗದ ಕಾಲಘಟ್ಟದ ಪ್ರೇಕ್ಷಕರಿಗೆ ತಲುಪಿಸುವಲ್ಲಿ ಸಹಾಯ ಮಾಡುತ್ತಿದೆ. ಈ ಮಾಧ್ಯಮಿಕ ಪ್ರಭಾವ ನಾಟಕವನ್ನು ಜನಪ್ರಿಯ ಸಂಸ್ಕೃತಿಯ ಕೇಂದ್ರದಲ್ಲಿ ಹೆಜ್ಜೆ ಇಡುತ್ತಿದೆ.

**ಸಾಂಸ್ಕೃತಿಕ ಉತ್ಸವಗಳು ಮತ್ತು ಜನಪ್ರಿಯ ಸಂಸ್ಕೃತಿ:**

ನಮ್ಮ ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಉತ್ಸವಗಳು ನಾಟಕಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಮಹತ್ವದ ವೇದಿಕೆಗಳಾಗಿವೆ. ಉದಾಹರಣೆಗೆ ಆಳ್ವಾಸ್ ನುಡಿಸಿರಿ, ರಂಗಶಂಕರ ಉತ್ಸವದಂತಹ ಕಾರ್ಯಕ್ರಮಗಳು ನಾಟಕ, ಸಾಹಿತ್ಯ, ಸಂಗೀತ ಮತ್ತು ನೃತ್ಯವನ್ನು ಒಟ್ಟಾಗಿ ಪರಿಚಯಿಸುತ್ತವೆ. ಯಕ್ಷಗಾನ ಮತ್ತು ಬಯಲಾಟಗಳು ಕರ್ನಾಟಕದ ಗ್ರಾಮೀಣ ಜನಪ್ರಿಯ ಸಂಸ್ಕೃತಿಯ ತಾಯಿಬೇರುಗಳು. ಇವು ಕೇವಲ ಪ್ರದರ್ಶನಗಳಲ್ಲ, ಬದಲಿಗೆ ಸಮುದಾಯದ ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಕಾಪಾಡುವ ಸಾಂಸ್ಕೃತಿಕ ಹಬ್ಬಗಳು. ಕರಾವಳಿ ಭಾಗದಲ್ಲಿ ಯಕ್ಷಗಾನವು ಇಂದಿಗೂ ಯುವಜನತೆಯನ್ನು ಸೆಳೆದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಇವು ಯುವಜನತೆಯಲ್ಲಿ ಸದೃಢ ಸಾಂಸ್ಕೃತಿಕ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಉತ್ಸವಗಳು ಕೇವಲ ಕಲಾ ಪ್ರದರ್ಶನಗಳು ಮತ್ತು ಮನರಂಜನೆಗೆ ಸೀಮಿತವಾಗದೆ ತಾರ್ಕಿಕ ಚರ್ಚೆ, ಕಾರ್ಯಾಗಾರ ಮತ್ತು ಸಂವಾದಗಳಿಗೆ ಅವಕಾಶ ಕಲ್ಪಿಸುತ್ತವೆ.

**ನಾಟಕ, ಸಾಮಾಜಿಕ ಚೈತನ್ಯ ಮತ್ತು ರಾಜಕೀಯ ಪ್ರಜ್ಞೆ:**

ನಾಟಕವು ಜನಪ್ರಿಯ ಸಂಸ್ಕೃತಿಯ ಮೂಲಕ ಸಾಮಾಜಿಕ ಮತ್ತು ರಾಜಕೀಯ ಆಚಾರ ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಶಕ್ತಿಯ ಮಾಧ್ಯಮವಾಗಿದೆ. ಜಾತಿ ವ್ಯವಸ್ಥೆ, ಲಿಂಗಭೇದ, ಶೋಷಣೆ ಮತ್ತು ಅಸಮಾನತೆಗಳಂತಹ ವಿಷಯಗಳನ್ನು ನಾಟಕಗಳು ಜನಪ್ರಿಯ ಭಾಷೆಯಲ್ಲಿ ಪ್ರಸ್ತುತಪಡಿಸುತ್ತವೆ. ಜನಪ್ರಿಯ ಸಂಸ್ಕೃತಿಯನ್ನು ಬಳಸಿಕೊಂಡು ನಾಟಕವು ಜನರಲ್ಲಿ ಮೌಲ್ಯಯುತ ಚಿಂತನೆ ಮತ್ತು ತಾರ್ಕಿಕ ಚರ್ಚೆಗೆ ಪ್ರೇರಣೆ ನೀಡುತ್ತದೆ. ಈ ಕಾರಣದಿಂದಲೇ ನಾಟಕವು ಸಮಾಜ ಪರಿವರ್ತನೆಯ ಸಾಧನವಾಗುತ್ತದೆ.

**ಸಮಕಾಲೀನ ಸವಾಲುಗಳು:**

ಇಂದಿನ ಕಾಲದಲ್ಲಿ ನಾಟಕವು ವಾಣಿಜ್ಯೀಕರಣದ ಆಂತರಿಕ ಒತ್ತಡವನ್ನು ಎದುರಿಸುತ್ತಿದೆ. ಜನಪ್ರಿಯತೆಗಾಗಿ ಅತಿರಂಜಿತ ಹಾಗೂ ಕಪೋಲಕಲ್ಪಿತ ಅಂಶಗಳನ್ನು ಬಳಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದರಿಂದ ನಾಟಕದ ಸಾಮಾಜಿಕ ಹಾಗೂ ಮೌಲಿಕ ಬದ್ಧತೆ ಕುಗ್ಗಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಆದರೂ, ಸಮಕಾಲೀನ ನಾಟಕಕಾರರು ಜನಪ್ರಿಯ ಸಂಸ್ಕೃತಿಯನ್ನು ವಿಮರ್ಶಾತ್ಮಕವಾಗಿ ಬಳಸಿಕೊಂಡು, ದುಡಿಸಿಕೊಂಡು ಅರ್ಥಪೂರ್ಣ ನಾಟಕಗಳನ್ನು

ಸೃಷ್ಟಿಸುತ್ತಿದ್ದಾರೆ. ಇದು ನಾಟಕದ ಭವಿಷ್ಯಕ್ಕೆ ಆಶಾದಾಯಕವಾಗಿದೆ. ಇಂದಿನ ಡಿಜಿಟಲ್ ಕಾಲದಲ್ಲಿ ಟಿವಿ ಮತ್ತು ಸಾಮಾಜಿಕ ಮಾಧ್ಯಮಗಳ ಅಬ್ಬರದ ನಡುವೆಯೂ ರಂಗಭೂಮಿಯ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಮುಂದಿನ ಪೀಳಿಗೆಗೆ ನಾಟಕ ಸಂಸ್ಕೃತಿ ಉಳಿಯುವ ಭರವಸೆ ಮೂಡಿಸುತ್ತಿದೆ. ನಾಟಕವು ಕರ್ನಾಟಕದ ಜನಪ್ರಿಯ ಸಂಸ್ಕೃತಿಯನ್ನು ಗಟ್ಟಿಗೊಳಿಸುವಲ್ಲಿ ದೊಡ್ಡ ಪಾತ್ರವಹಿಸಿದೆ. ಸಿನಿಮಾ ಬಂದಾಗ ನಾಟಕ ಅಳಿಯುತ್ತದೆ ಎಂಬ ಭಯವಿತ್ತು, ಆದರೆ ನಾಟಕವು ಸಿನಿಮಾವನ್ನೇ ಪೋಷಿಸಿತು. ಇಂದು ಡಿಜಿಟಲ್ ಮಾಧ್ಯಮಗಳ ಕಾಲದಲ್ಲೂ ನಾಟಕವು ಸಜೀವ ಸಂವಹನದ ಮೂಲಕ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ.

**ಉಪಸಂಹಾರ:**

ನಾಟಕ ಮತ್ತು ಜನಪ್ರಿಯ ಸಂಸ್ಕೃತಿ ಪರಸ್ಪರ ಅವಿನಾಭಾವ ಸಂಬಂಧವನ್ನು ಹೊಂದಿವೆ. ನಾಟಕವು ಜನಪ್ರಿಯ ಸಂಸ್ಕೃತಿಯಿಂದ ವಿಷಯ ಮತ್ತು ರೂಪಗಳನ್ನು ಪಡೆದುಕೊಳ್ಳುತ್ತದೆ; ಅದೇ ಸಮಯದಲ್ಲಿ ಜನಪ್ರಿಯ ಸಂಸ್ಕೃತಿಯನ್ನು ರೂಪಿಸುವಲ್ಲಿಯೂ ಸಮಾನ ಪಾತ್ರವಹಿಸುತ್ತದೆ. ಈ ಪರಸ್ಪರ ಒಳಗೊಳ್ಳುವಿಕೆಯ ಮೂಲಕ ನಾಟಕವು ಸಮಾಜದ ಮೌಲ್ಯಯುತ ಪರಿವರ್ತನೆಗಳಿಗೆ ಸ್ಪಂದಿಸುತ್ತಾ ಹೊಸ ಸಾಂಸ್ಕೃತಿಕ ಅರ್ಥಗಳನ್ನು ಸೃಷ್ಟಿಸುತ್ತದೆ. ಭವಿಷ್ಯದಲ್ಲಿಯೂ ನಾಟಕವು ಜನಪ್ರಿಯ ಸಂಸ್ಕೃತಿಯೊಂದಿಗೆ ಸಂವಾದ ನಡೆಸುತ್ತಾ ತನ್ನ ಸಾಮಾಜಿಕ ಮಹತ್ವವನ್ನು ಉಳಿಸಿಕೊಳ್ಳಲಿದೆ ಎಂದು ಭಾವಿಸುತ್ತೇನೆ.

**ಪರಾಮರ್ಶನ ಗ್ರಂಥಗಳು:**

1. ಭರತಮುನಿ, (2010), ನಾಟ್ಯಶಾಸ್ತ್ರ (ಅನುವಾದ: ಆದ್ಯ ರಂಗಾಚಾರ್ಯ), ಹೆಗ್ಗೋಡು: ಅಕ್ಷರ ಪ್ರಕಾಶನ.
2. ಕುವೆಂಪು, (1968), ಸಾಹಿತ್ಯ ಮತ್ತು ಜೀವನ, ಮೈಸೂರು: ಉದಯರವಿ ಪ್ರಕಾಶನ.
3. ಕಾರಂತ ಬಿ.ವಿ., (2013), ಇಲ್ಲಿರುವುದು ಸುಮ್ಮನೆ (ನಿರೂಪಣೆ: ವೈದೇಹಿ), ಹೆಗ್ಗೋಡು: ಅಕ್ಷರ ಪ್ರಕಾಶನ.
4. ನಾಯಕ್ ಜಿ.ಎಚ್., (1984), ನಿರಪೇಕ್ಷ, ಹೆಗ್ಗೋಡು: ಅಕ್ಷರ ಪ್ರಕಾಶನ.
5. ಚಿದಾನಂದಮೂರ್ತಿ ಎಂ., (1999), ವಚನ ಸಾಹಿತ್ಯ, ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ.
6. ಕೀರ್ತಿನಾಥ ಕುರ್ತಕೋಟಿ, (1962), ಯುಗಧರ್ಮ, ಧಾರವಾಡ: ಮನೋಹರ ಗ್ರಂಥಮಾಲಾ.
7. ಶಿವರಾಮ ಕಾರಂತ ಕೆ., (1957), ಯಕ್ಷಗಾನ ಬಯಲಾಟ, ಪುತ್ತೂರು: ಹರ್ಷ ಪ್ರಕಟಣಾಲಯ.
8. ಚಂದ್ರಶೇಖರ ಕಂಬಾರ, (2010), ಇದು ದೇಸಿ, ಹೆಗ್ಗೋಡು: ಅಕ್ಷರ ಪ್ರಕಾಶನ.